ಅಧಿಕಾರವಿಲ್ಲ ಎಂದರೆ ವಾಸ್ತವಿಕತೆ ನನಗೇನು ಗೊತ್ತಾಗುತ್ತದೆ? ನಾನು ಒಂದು ಜಿಲ್ಲೆಗೆ ಹೋಗಿ ಜನರ ಸಮಸ್ಯೆಯನ್ನು ತೆಗೆದುಕೊಂಡು ಚರ್ಚೆ ಮಾಡಿ ಇದು ಹೌದೋ ಅಲ್ಲವೋ ಎಂದು ಅಧಿಕಾರಿಗಳಿಗೇ ಕೇಳಿ ಮಾಹಿತಿಯನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ ಎಂದರೇ ನಾನೇಕ ಆ ಸ್ಥಾನದಲ್ಲಿರಬೇಕು? ವಿರೋಧ ಪಕ್ಷದ ನಾಯಕನ ಸ್ಥಾನ ಬೇಡ. ತೆಗೆದುಕೊಂಡು ಬಿಡಿ.

(ಗೊಂದಲ)

ಅಧ್ಯಕ್ಷರು : ನೀವು ಆತುರಪಟ್ಟು ಕಾರನ್ನು ಹಿಂದಿರುಗಿಸಿದರೆ, ಬಂಗಲೆಯನ್ನು ಹಿಂದಿರುಗಿಸಿದರೆ ಒಂದು ತಪ್ಪು ಅರ್ಥ ಏನುಂಟಾಗುತ್ತದೆ ಎಂದರೆ ನಿಮ್ಮ ಮನಸ್ಸಿನಲ್ಲಿ ನೀವು ಒಬ್ಬರು ಮಿನಿಸ್ಟ್ರು ಎಂದು ಹೇಳಿ ಭಾವಿಸಿಕೊಂಡಿದ್ದಿರೇನೋ ಎನ್ನುವ ಅರ್ಥ ಬರುತ್ತದೆ.

ಶ್ರೀ ಎಸ್. ಯಡಿಯೂರಪ್ಪ : ಇವರ ತಲೆ ಕೆಟ್ಟದೆ ಅಧ್ಯಕ್ಷರೇ,

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಶಿವಕುಮಾರಸ್ವಾಮಿಯವರೇ, ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಂತ್ರಿ ಎಂದು ತಿಳಿದುಕೊಂಡಿಲ್ಲ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ದಯಮಾಡಿ ತಾವು ಕೇಳಬೇಕು, ದಯಮಾಡಿ ಕುಳಿತುಕೊಳ್ಳಿ. ನಾನು ನಿಂತಿದ್ದೇನೆ. ನಾನು ತಾವು ತಿಳಿದುಕೊಂಡಿದ್ದೀರಿ ಎನ್ನುವ ಮಾತನ್ನು ನಾನು ಹೇಳಿಲ್ಲ. ತಮ್ಮ ಮೇಲೆ ಆಪಾದನೆ ಮಾಡಲಿಲ್ಲ. ದಯಮಾಡಿ ಕೇಳಿ. ಕುಳಿತುಕೊಳ್ಳಿ ಮಂಜುನಾಥ್‌ರವರೇ, ನಾನು ಹೇಳಿದ್ದುದು ಇಷ್ಟೇ. ನನಗೆ ಆ ಸವಲತ್ತನ್ನು ಸರ್ಕಾರದವರು ಕೊಟ್ಟಿಲ್ಲ. ತಾವು ಪಾರ್ಲಿಮೆಂಟರಿ ಫಂಕ್ಷನರಿ. ಆ ರೀತಿ ಅಭಿಪ್ರಾಯಕ್ಕೆ ಬರುವುದಕ್ಕೆ ನಾವು ಅವಕಾಶವನ್ನು ಕೊಡಬಾರದು. ನೀವು ಆ ರೀತಿ ಮಾಡಿದರೆ ಏನಾಗುತ್ತದೆ ಎಂದರೆ ನನ್ನ ಮೇಲೆ ನೀವು ಪ್ರತಿಭಟನೆ ಮಾಡಿದಿರಿ ಎಂದಾಗುತ್ತದೆಯೇ ಹೊರತು ಸರ್ಕಾರದ ಮೇಲೆ ಪ್ರತಿಭಟನೆ ಮಾಡಿದಿರಿ ಎನ್ನುವ ಅರ್ಥ ಬರುವುದಿಲ್ಲ. ಅದಕ್ಕೆ ಅವಕಾಶ ಕೊಡಬಾರದು ಎಂದು ನಾನು ತಮಗೆ ಹೇಳಿದ್ದುದು. ನಾನು ಹೇಳುತ್ತೇನೆ ಕೇಳಿ. ನಮ್ಮ ವ್ಯವಸ್ಥೆಯೊಳಗೆ ತಾವು - You are the shadow Chief Minister. In the event of the failure of this Governmnt, the Constitutional Head has the obligation of inviting you to take up the responsibility. ಆ ಕಾರಣದಿಂದ ನಾನು ಹೇಳುತ್ತಿರುವುದು. ದಯಮಾಡಿ ನೀವು ಉದ್ವೇಗಕ್ಕೆ ಒಳಗಾಗಬೇಡಿ.

(ಗೊಂದಲ)

ಅಧ್ಯಕ್ಷರು : "ಇಂಪಾಸ್" ಆಗಬಹುದು, ಬೇಡ.

(ಗೊಂದಲ)

ಶ್ರೀ ಹೆಚ್. ಎನ್. ನಂಜೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಒಂದು ನಿಜವಾಗಲೂ..

(ಗೊಂದಲ)

(ಈ ಹಂತದಲ್ಲಿ ಬಿಜೆಪಿ ಸದಸ್ಯರುಗಳು ಸಭಾತ್ಯಾಗ ಮಾಡಿದರು).

(ಗೊಂದಲ)